ಪದ್ಯಪಲ್ಲವ



## ಕಡೆಂಗೋಡ್ಲು ಶಂಕರಭಟ್ಟ

ಕಲೆ: ದೀಕ್ಷಿತ್ ಪಿ.

# ಇಂದಿನ ದೇವರು

ಸತ್ತ ದೇವರು ಸತ್ಯದೇವರು,
ನಮ್ಮ ಹಿಂದಿನ ದೇವರು.
ನಿತ್ಯಜೀವರು, ಶುದ್ಧಶೀಲರು,
ನಮ್ಮ ಹಿಂದಿನ ದೇವರು.
ಒಲವಿನಲಿ ನಲವಾಗದಿದ್ದರೆ?
ಗೆಲವಿನಲಿ ಬಲವಾಗದಿದ್ದರೆ?
ಅನುಭವದಿ ಚೆಲುವಾಗದಿದ್ದರೆ?
ನಮ್ಮ ಹಿಂದಿನ ದೇವರು?
ನಮ್ಮೊಡನೆ ನಾವಾಗಿ ಬಾರರೆ?
ಹಾಡು ಹರಕೆಯ ತಂದರು?

ಮಣ್ಣು, ಮರಗಳು, ನಾಕ–ನಂದನ,
ಜೀವವರಳಿದ ಸುಗ್ಗಿಗೆ–
ಕಲ್ಲುಕಡೆಹಕೆ ರೇಖೆ ಚಿನ್ಮಯ–
ದಿವ್ಯಭಾವದ ಹಿಗ್ಗಿಗೆ–
ದೇವ–ಮನುಜರು, ಮನುಜ–ದೇವರು,
ಸುಮನಸರು ಸಮರಸದ ಜೀವರು,
ಒಡಲ ದೇಗುಲ ಹುಡುಕಿ ಬಾರರೆ?
ಹೃದಯಪೀಠವನೇರರೆ?
ಸೋಹಮೆನೆ ದಾಸೋಹಮೆಂದರು,
ಸುಪ್ರಸನ್ನರೆ, ಸುಭಗರೆ?

ಉಸಿರ ಒಳ ಉಸಿರಾಗಿ, ಅಂತ–
ರ್ಗತಿಗೆ ಮತಿಯಾಗಿದ್ದರು.
ವೇದವಾದರು ಬೋಧವಾದರು,
ನಾದಮೂರ್ತಿಗಳಾದರು.
ಗೋಚರಾಗೋಚರ ಚರಾಚರ
ವಿಶ್ವರೂಪದ ವಿಭವ ವಿಸ್ತರ–

